**ದಿನಾಂಕ:10-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಎಂ.ಟಿ. ವಕೀಲರಿಂದಃ**

ನಾನು 7 ನೇ ತರಗತಿ ಓದಿದ್ದೇನೆ. ನಾನು ಹೌಸ್ ವೈಫ್. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಿಲು ಬರೆಯಲು ಬರುತ್ತದೆ. ನನ್ನ ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತು. ಆರೋಪಿ 18 ವರ್ಷ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. 10-12 ವರ್ಷಗಳ ಹಿಂದೆ ಖಾಲಿ ಮಾಡಿದ್ದಾರೆ. ಬಾಡಿಗೆದಾರರು ಇದ್ದ ಬಗ್ಗೆ ದಾಖಲೆಗಳು ಈಗ ಇಲ್ಲ. ಅವರು ಬಾಳೆ ಎಲೆ ವ್ಯಾಪಾರಿ. ಅವರ ಅಂಗಡಿ ಚಾಮರಾಜಪೇಟೆಯಲ್ಲಿದೆ ವಿಳಾಸ ಗೊತ್ತಿಲ್ಲ. ನಮ್ಮ ಮನೆಯಲ್ಲಿ ನಾನು ನನ್ನ ಗಂಡ , ನನ್ನ ಇಬ್ಬರು ಮಕ್ಕಳು ಸೊಸೆ ಇದ್ದೇವೆ. ನನ್ನ ಗಂಡ ಜಮೀನುದಾರ ಹಾಗೂ ಸ್ಪೋರ್ಟ್ಸ್ ಕೌನ್ಸಲ್ ಡೈರೆಕ್ಟರ್ ಆಗಿದ್ದರು. ನನ್ನ ದೂರಿನಲ್ಲಿರುವ ವಿಳಾಸ ನನ್ನ ಸ್ವಂತ ಮನೆಯ ವಿಳಾಸ. ಆರೋಪಿ ಚಾಮರಾಜಪೇಟೆಯ 5 ನೇ ಮುಖ್ಯ ರಸ್ತೆಯಲ್ಲಿದ್ದ ಮನೆಯಲ್ಲಿ ಬಾಡಿಗೆಗೆ ಇದ್ದರು. ಈಗ 10 ವರ್ಷಗಳ ಹಿಂದೆ ಅದನ್ನು ಕೆಡವಿದ್ದಾರೆ. 1999-2017 ರ ವರೆಗೆ ಬಾಡಿಗೆಗೆ ಇದ್ದರು. ಸಾಕ್ಷಿ ಮುಂದುವರಿದು ಹೇಳುತ್ತಾರೆ ಮನೆ ಕೆಡವುವ ಮೊದಲೇ ಬಿಟ್ಟು ಹೋಗಿದ್ದಾರೆ ಎಂದು. ಅವರು ನಮ್ಮ ಇನ್ನೊಂದು ಮನೆಗೆ ವರ್ಗಾಯಿಸಿಕೊಂಡರು ಎಂದರೆ ಸರಿಯಲ್ಲ.

ಆರೋಪಿ ನಮಗೆ 7 ಲಕ್ಷ ಹಣ ಕೇಳಿದ್ದರು ನಾನು 5.5 ಲಕ್ಷ ಕೊಟ್ಟಿದ್ದೇನೆ. 2017 ರಲ್ಲಿ ಕೊಟ್ಟಿದ್ದೇನೆ ತಿಂಗಳು ದಿನಾಂಕ ನೆನಪಿಲ್ಲ. ದೂರಿನಲ್ಲಿ ಹಣವನ್ನು ಯಾವಾಗ ಕೇಳಿದರು ಎಂದು ಬರೆದಿಲ್ಲ. 2017 ರ 6 ನೇ ತಿಂಗಳಲ್ಲಿ ಹಣ ಕೇಳಿರುತ್ತಾರೆ. ಹಣವನ್ನು ನಮ್ಮ ಮನೆಯಲ್ಲಿ ಕೇಳಿರುತ್ತಾರೆ. ಹಣವನ್ನು ಮಧ್ಯಾಹ್ನ 3 ಗಂಟೆಯಲ್ಲಿ ಕೇಳಿರುತ್ತಾರೆ. ಆ ಸಮಯದಲ್ಲಿ ನನ್ನ ಗಂಡ, ನನ್ನ ಮಗ, ಹಾಗೂ ವಿಶ್ವನಾಥ ಎನ್ನುವವರು ಇದ್ದರು. ಹಣ ಕೇಳಿದ ಸಮಯದಲ್ಲಿ ಅವರು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. ಹಣ ಕೇಳಿದ 2 ದಿನಗಳ ನಂತರ ಹಣ ಕೊಟಿಟದ್ದೇನೆ. ಅವರು ತಮ್ಮ ವ್ಯಾಪಾರ ಅಭಿವೃದ್ಧಿಗೋಸ್ಕರ ಕೇಳಿದ್ದರು. ಹಣ ಕೇಳುವ ಸಮಯದಲ್ಲಿ ಆರೋಪಿ ಹಾಗೂ ಅವರ ಮಗ ಇಬ್ಬರೂ ಬಂದಿದ್ದರು. ಆರೋಪಿಗೆ 5 ಲಕ್ಷ ಹಣವನ್ನು ಒಂದು ಬಾರಿ ಕೊಟ್ಟಿದ್ದೇನೆ. ದಿನಾಂಕ ತಿಂಗಳು ಮರೆತು ಹೋಗಿದೆ 6 ನೇ ತಿಂಗಳು ಇರಬಹುದು. ಹಣವನ್ನು ನಮ್ಮ ಮನೆಯಲ್ಲೇ ಕೊಟ್ಟಿದ್ದೇನೆ. ಹಣ ಕೊಟ್ಟ ಸಮಯ ನೆನಪಿಲ್ಲ. 100 ರೂಪಾಯಿಯ ಮುಖ ಬೆಲೆಯ ನೋಟುಗಳನ್ನು ಕೊಟ್ಟಿದ್ದೇನೆ. ಆರೋಪಿ ಪುನಃ 8 ನೇ ತಿಂಗಳಿನಲ್ಲಿ 50 ಸಾವಿರ ತೆಗೆದುಕೊಂಡಿದ್ದಾರೆ. ಆ ಹಣವನ್ನೂ ಸಹ ವ್ಯಾಪಾರ ವೃದ್ಧಿಗಾಗಿ

ಕೇಳಿದ್ದರು. ನಮಗೆ ಬಾಡಿಗೆ ಬರುತ್ತಿತ್ತು ನಾವು ದಿವಾನ್ ಸರ್ ಕೆ.ಪಿ.ಪುಟ್ಟಣ್ಣ ಶೆಟ್ಟಿಯವರ ಮನೆಯವರು ನಮಗೆ ಸಾಕಷ್ಟು ಆಸ್ತಿ ಇದೆ ಎಂದು ಹೇಳುತ್ತಾರೆ. ನನಗೆ ಬ್ಯಾಂಕಿನ ವ್ಯವಹಾರ ಜ್ಞಾನ ಇದೆ. ಬಂದ ಹಣವನ್ನು ಬ್ಯಾಂಕಿಗೆ ಹಾಕುತ್ತಿದ್ದೆವು ಹಾಗೂ ಖರ್ಚಿಗೆ ಬೇಕಾದರೆ ಇಟ್ಟು ಕುಳ್ಳುತ್ತಿದ್ದೆವು. ಖರ್ಚಿಗಾಗಿ 1 ಲಕ್ಷ 2 ಲಕ್ಷ ಹೀಗೆ ಇಟ್ಟುಕೊಳ್ಳುತ್ತಿದ್ದೆವು. ಬಾಡಿಗೆ ಬರುತ್ತಿದ್ದ ಬಗ್ಗೆ ಹಾಗೂ ನಮಗೆ ಆದಾಯ ಇರುವ ಬಗ್ಗೆ ದಾಖಲೆ ಕೊಟ್ಟಿಲ್ಲ. ಆ ಬಗ್ಗೆ ದಾಖಲೆಗಳನ್ನು ಕೊಡಲು ತೊಂದರೆ ಇಲ್ಲ. ಆರೋಪಿಗೆ ಹಣವನ್ನು ಚೆಕ್ ಮೂಲಕ ಡಿಡಿ ಮೂಲಕ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತುರ್ತಾಗಿ ನಗದು ಬೇಕಾಗಿದೆ ಎಂದು ಕೇಳಿದ್ದರಿಂದ ನಗದಾಗಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಆರೋಪಿ ಹಣವನ್ನು 6 ತಿಂಗಳಲ್ಲಿ ಕೊಡುತೆತೇನೆ ಎಂದು ಹೇಳಿದ್ದರು. ಆ ಬಗ್ಗೆ ದಾಖಲೆ ಬರೆದಿಲ್ಲ ಆದರೆ ಚೆಕ್ಕು ಮತ್ತು ಪ್ರಾಮಿಸರಿ ನೋಟ್ ಕೊಟ್ಟಿದ್ದಾರೆ. ಶೇ 2 ರ ಬಡ್ಡಿ ಕೊಡುತ್ತೇವೆ ಎಂದು ದಾಖಲೆ ಬರೆದುಕೊಟ್ಟಿದ್ದರು.

ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. 50 ಸಾವಿರ ಹಣ ಪಡೆದಾಗ ಆರೋಪಿ ಒಬ್ಬರೇ ಬಂದಿದ್ದರು. ನನ್ನ ಬಳಿ 5.5 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ನಮ್ಮ ಮನೆಯಲ್ಲಿ ಎಲ್ಲರೂ ವಿದ್ಯಾವಂತರೇ ಇದ್ದಾರೆ ಎಂದರೆ ಸರಿ. 20 ಸಾವಿರಕ್ಕಿಂತ ಮೇಲ್ಪಟ್ಟು ಹೆಚ್ಚಿನ ಹಣವನ್ನು ನಗದಾಗಿ ಕೊಡಲು ಬರುವುದಿಲ್ಲ ಎಂಬ ಕಾನೂನು ನನಗೆ ಗೊತ್ತಿಲ್ಲ. ಹಣ ಕೊಟ್ಟಾಗ ಚೆಕ್ ಮತ್ತು ಪ್ರಾಮಿಸರಿ ನೋಟ್ ಬಿಟ್ಟು ಬೇರೆ ದಾಖಲೆಗಳನ್ನು ಬರೆಸಿಕೊಂಡಿಲ್ಲ. ನಿ.ಪಿ.1 ಮತ್ತು 2 ಚೆಕ್ಕನ್ನು ಹಣ ತೆಗೆದುಕೊಂಡ 2 ದಿನಗಳ ನಂತರ ನಮ್ಮ ಮನೆಯಲ್ಲಿ ಕೊಟ್ಟಿರುತ್ತಾರೆ. 2017 ರಲ್ಲೇ ಕೊಟ್ಟಿರುತ್ತಾರೆ. 6 ತಿಂಗಳ ನಂತರ ಆರೋಪಿಗೆ ಹಣ ವಾಪಸ್ ಕೊಡಿ ಎಂದು ಕೇಳಿದ್ದೇನೆ. ಬರವಣಿಗಯಲ್ಲಿ ಕೇಳಿಲ್ಲ. ವಾಪಸ್ ಕೊಡಿ ಎಂದು ಕೇಳಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರಲ್ಲಿರುವ ಬರವಣಿಗೆಗಳನ್ನು ಆರೋಪಿಯೇ ಬರೆದುಕೊಟ್ಟಿದ್ದಾರೆ. ಸಹಿ ತಮಿಳಿನಲ್ಲಿದೆ ಎಂದರೆ ಸಾಕ್ಷಿಯು ಅವರು ತಮಿಳಿನಲ್ಲೇ ಮಾಡುತ್ತಾರೆ ಎಂದು ಹೇಳುತ್ತಾರೆ. ನಿ.ಪಿ.1 ಮತ್ತು 2 ರಲ್ಲಿರುವ ಬರವಣಿಗೆ ಹಾಗೂ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಚಲನ್ ಅನ್ನು ನ್ಯಾಯಾಲಯಕ್ಕೆ ಕೊಡಲು ಆಗುವುದಿಲ್ಲ. ಚಲನ್ ನಲ್ಲಿರುವ ಬರವಣಿಗೆ ಹಾಗೂ ಚೆಕ್ ನಲ್ಲಿರುವ ಬರವಣಿಗೆ 2 ಒಂದೇ ಇರುವ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.8 ಮತ್ತು 9 ರಲ್ಲಿರುವ ಬರವಣಿಗೆ ಯಾರುದು ಎಂದರೆ ಸಾಕ್ಷಿಯು ಅವರೇ ಬರೆದು ತಂದು ಕೊಟ್ಟಿದ್ದಾರೆ ಎಂದು

ಹೇಳುತ್ತಾರೆ. ನಿ.ಪಿ.8 ಮತ್ತು 9 ರಲ್ಲಿ ಬರೆದವರು ಯಾರು ಎಂಬ ಜಾಗ ಖಾಲಿ ಎಂದರೆ ಸರಿ. ಸಾಕ್ಷಿಗಳಾಗಿ ವಿಶ್ವನಾಥ ಹಾಗೂ ನಾಗರಾಜ್ ಸಹಿ ಮಾಡಿರುತ್ತಾರೆ. ನಾಗರಾಜ್ ನನ್ನ ತಮ್ಮ ವಿಶ್ವನಾಥ ನನ್ನ ಗಂಡನ ಸ್ನೇಹಿತರು. ನಿ.ಪಿ.8 ಮತ್ತು 9 ನ್ನು ಬೇರೆ ಬೇರೆ ದಿನ ಕೊಟ್ಟಿದ್ದಾರೆ. ನಾಗರಾಜು ಹಾಗೂ ವಿಶ್ವನಾಥ ಅವರನ್ನು ಸಾಕ್ಷಿ ಮಾಡಿಲು ತೊಂದರೆ ಇಲ್ಲ. ನಿ.ಪಿ.8 ಮತ್ತು 9 ರಲ್ಲಿರುವ ಸಹಿಗಳು ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿ.ಪಿ. 8 ಮತ್ತು 9 ಕ್ಕೆ ನನ್ನ ಮುಂದೇಯೇ ಸಹಿ ಹಾಕಿರುತ್ತಾರೆ ಯಾರು ಮೊದಲು ಸಹಿ ಮಾಡಿದರು ಎಂದು ಗೊತ್ತಿಲ್ಲ.

ಬ್ಯಾಂಕಿಗೆ ಹಾಕಿನ ನಂತರ ಆರೋಪಿಗೆ ನೋಟೀಸ್ ಕೊಟ್ಟಿದ್ದೇನೆ. ನೋಟಿಸ್ ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನೋಟಿಸನ್ನು ಚಾಮರಾಜಪೇಟೆಯ ಅವರ ಅಂಗಡಿ ವಿಳಾಸಕ್ಕೆ ಕೊಟ್ಟಿದ್ದೆವು. ಗಿರಿನಗರದಲ್ಲಿ ಅವರ ಮನೆ ಇತ್ತು ಆ ವಿಳಾಸಕ್ಕೆ ಕಳುಸಿದ್ದು ಅವರು ತೆಗೆದುಕೊಂಡಿಲ್ಲ. ಆ ಬಗ್ಗೆ ದಾಖಲೆ ಕೊಟ್ಟಿದ್ದೇನೋ ಇಲ್ಲವೋ ಗೊತ್ತಿಲ್ಲ. ಅವರ ಮನೆಯ ವಿಳಾಸಕ್ಕೆ ನೋಟಿಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕಳುಹಿಸಿದ ನೋಟೀಸ್ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಬಾಳೆ ಎಲೆ ವ್ಯಾಪಾರ ಮಾಡುತ್ತಿದ್ದರು ಎಂದು ದಾಖಲೆ ಕೊಟ್ಟಿಲ್ಲ. ಈಗ ಅಂಗಡಿ ಮುಚ್ಚಿದೆ ಎಂದರೆ ಸರಿ. 2015 ರಿಂದಲೂ ಆ ಅಂಗಡಿಗೆ ಸಂಬಂಧಿಸಿದಂತೆ ಕೇಸ್ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. 2015 ರಲ್ಲಿ ಅಂಗಡಿ ಮುಚ್ಚಿದ ವಿಚಾರ ಗೊತ್ತು ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು ಗೊತ್ತಿಲ್ಲ. 1999 ರಿಂದ ಇಲ್ಲಿಯವರೆಗೂ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಮಧುರೈನಲ್ಲಿ ಆಸ್ತಿ ಇದೆ ಮಾರಿ ಹಣ ಕೊಡುತ್ತೇನೆ ಎಂದು ಹೇಳಿದ್ದರು. ಆಸ್ತಿ ಇರುವ ಬಗ್ಗೆ ದಾಖಲೆ ನೋಡಿಲ್ಲ. ಆರೋಪಿಗೆ 5.5 ಲಕ್ಷ ಹಣದ ಅವಶ್ಯಕತೆ ಇರಲಿಲ್ಲ ಎಂದೂ ಅವರು ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5.5 ಲಕ್ಷ ಹಣ ಕೊಡುವಷ್ಟು ನನಗೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಆದಾಯ ತೆರಿಗೆಯನ್ನು ನಾನು ಕಟ್ಟುವುದಿಲ್ಲ ನನ್ನ ಗಂಡ ಕಟ್ಟುತ್ತಾರೆ. 2017 ರಲ್ಲಿ ಆರೋಪಿಗೆ ಬಿಟ್ಟು ಬೇರೆ ಕುಮಾರ ಎನ್ನುವವರಿಗೆ ಸಾಲ ಕೊಟ್ಟಿದ್ದೇನೆ. ಬೇರೆ ಯಾರಿಗೂ ಕೊಟ್ಟಿಲ್ಲ. ಕುಮಾರ್ ಗೆ 20 ಲಕ್ಷ ಹಣ ಕೊಟ್ಟಿದ್ದೇನೆ. ಯಾವ ತಿಂಗಳಲ್ಲಿ ಹಣ ಕೊಟ್ಟೆ ಎಂದು ನೆನಪಿಲ್ಲ. ಸದರಿ 20 ಲಕ್ಷ ಹಣ ನನಗೆ ನನ್ನ ಗಂಡ ಕೊಟ್ಟಿರುತ್ತಾರೆ. ನಮ್ಮ ಮನೆ ಅಂಗಡಿಗಳನ್ನು ಕೆಡವಿದ್ದರಿಂದ ಹಣ ಬಂದಿತ್ತು. 1999-2017 ರ ವರೆಗೆ ಆರೋಪಿ ನಮ್ಮ

ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ಸರಿ. ಸಾಕ್ಷಿಗೆ ಆಬಗ್ಗೆ ಒಂದು ಬಾಡಿಗೆ ಕರಾರನ್ನು ತೋರಿಸಿದ್ದು ಒಪ್ಪಿಕೊಂಡ ಕಾರಣ ಅದನ್ನು ಅಡ್ಡಲಾಗಿ **ನಿ.ಡಿ.1** ಎಂದು ಗುರುತಿಸಲಾಯಿತು. ಅವರು ಪ್ರತೀ ತಿಂಗಳು ಬಾಡಿಗೆ ಕೊಡುತ್ತಿರಲಿಲ್ಲ ವ್ಯಾಪಾರದಲ್ಲಿ ಹಣ ಬಂದಾಗ ಕೊಡುತ್ತಿದ್ದರು ಎಂದರೆ ಸರಿಯಲ್ಲ. 2017 ರಲ್ಲಿ ಒಂದು ತಿಂಗಳು ಬಾಡಿಗೆ ಕೊಡದ ಕಾರಣ ಆರೋಪಿಯಿಂದ ಈ 2 ಚೆಕ್ಕಗಳನ್ನು ಭದ್ರತೆಗಾಗಿ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸಹಿ ಮಾಡದೇ ಇರುವ 2 ಖಾಲಿ ಚೆಕ್ಕುಗಳನ್ನು ಭದ್ರತೆಗಾಗಿ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ಅವರಿಂದ ಅಕ್ರಮವಾಗಿ ಹಣ ಪಡೆಯುವ ಉದ್ದೇಶದಿಂದ ನಿ.ಪಿ.1 ಮತ್ತು 2 ದಾಖಲೆಗಳನ್ನು ಬರೆದುಕೊಂಡು ಹಾಕಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.8 ಮತ್ತು 9 ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ಮತ್ತು 9 ಕ್ಕೆ ಸಾಕ್ಷಿ ಹಾಕಿರುವ ವಿಶ್ವನಾಥ ಮತ್ತು ನಾಗರಾಜ್ ನ್ಯಾಯಾಲಯಕ್ಕೆ ಬಂದಿದ್ದಾರೆ. ಅವರಿಗೆ ನ್ಯಾಯಾಲಯದಿಂದ ನೋಟೀಸ್ ಬಂದಿರಲಿಲ್ಲ. ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಕರೆಸಿದ್ದೀರಿ ಎಂದರೆ ಸಾಕ್ಷಿಯು ಅವರು ನಮ್ಮ ಮ್ಯಾನೇಜರ್ ಯಾವಾಗಲೂ ನಮ್ಮ ಜೊತೆ ಇರುತ್ತಾರೆ. ನಾಗರಾಜ್ ನನ್ನ ತಮ್ಮ ಎಂದು ಹೇಳುತ್ತಾರೆ. ನಿ.ಪಿ.8 ಮತ್ತು 9 ನ್ನು ಸಾಕ್ಷಿದಾರರು ಬರೆದಿಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಅಕ್ರಮವಾಗಿ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಉಮೇಶ.ಹೆಚ್.ಕೆ.)**
**ಎಸಿಎಂಎಂ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು**